ದಿನಾಂಕ 17.03.2026. ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಹೆಚ್ ಜೆ ವಕೀಲರಿಂದಃ

4. ಈ ದಾವಾ ಸ್ವತ್ತನ್ನು ಒಟ್ಟು ಅವಿಭಕ್ತ ಕುಟುಂಬದಿಂದ ಖರೀದಿ ಮಾಡಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೇ ಹೌದು. 4 ಮತ್ತು 5ನೇ ಪ್ರತಿವಾದಿಗಳು ಸುಮಾರು 50 ವರ್ಷಗಳಿಂದು ಬೆಂಗಳೂರಿನಲ್ಲಿ ವಾಸ ಇದ್ದಾರೆ. ಬೆಂಗಳೂರಿನಲ್ಲಿ ಬಾರ್ ಅಂಡ್ ರೆಸ್ಟೋರೇಟ್ ನಡೆಸುವಾಗ ಪ್ರತಿ ವರ್ಷ ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ನಾನು 30 ವರ್ಷಗಳಿಂದ ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ಎಲ್ಲಾರು ಸೇರಿ ಅವಿಭಕ್ತ ಕುಟುಂಬದಿಂದ ದಾವಾ ಸ್ವತ್ತನ್ನು ಖರೀದಿ ಮಾಡಿದ್ದಾನೆ ಎಂದು ಆದಾಯ ತೆರಿಗೆಯಲ್ಲಿ ತೋರಿಸಿದ್ದೀರ ಎಂದರೇ ಇಲ್ಲ.

5. 5ನೇ ಪ್ರತಿವಾದಿ ಹೆಸರಿನಲ್ಲಿ ಎಷ್ಟು ಆಸ್ತಿ ಇದೆ ಎಂದು ಗೊತ್ತಿಲ್ಲ. ಆದರೆ ಇದೆ. 4ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಹೆಸರಿನಲ್ಲಿ ಎಷ್ಟು ಆಸ್ತಿ ಇದೆ ಎಂದು ಗೊತ್ತಿಲ್ಲ. ಆದರೆ ಆಸ್ತಿ ಇದೆ. ನನ್ನ ಹೆಸರಿನಲ್ಲಿ ಎಷ್ಟು ಆಸ್ತಿ ಇದೆ ಎಂದರೇ ಹೇಳಲು ಬರುವುದಿಲ್ಲ. ಆದರೆ ಆಸ್ತಿ ಇದೆ.ಈ ದಾವೆ ದಾಖಲೆ ಆದ ನಂತರ ಎಷ್ಟು ಆಸ್ತಿಗಳನ್ನು 4ನೇ ಪ್ರತಿವಾದಿಗೆ ದಾನ ಪತ್ರದ ಮೂಲಕ ನೀಡಿದ್ದೀರ ಎಂದರೇ ನೆನಪಿಲ್ಲ. ಆದರೆ ಮಾಡಿದ್ದೇನೆ. ಮೈಸೂರು ಜಿಲ್ಲೆ, ಟಿ ನರಸೀಪುರ ತಾಲ್ಲೂಕು, ಕೆಂಪಾಪುರ ಗ್ರಾಮದಲ್ಲಿರುವ ದಾವಾ ಸ್ವತನ್ನು 4ನೇ ಪ್ರತಿವಾದಿಗೆ ದಾನ ಪತ್ರದ ಮೂಲಕ ನೀಡಿದ್ದೇನೆ ಎಂದರೇ ಹೌದು. ಆದರ ವಿಸ್ತೀರ್ಣ 23 ಎಕರೆ 35 ಗುಂಟೆ ಎಂದರೇ ಹೌದು. ಅದೇ ರೀತಿ ಬೆಂಗಳೂರು ಯಶವಂತಪುರ ನಾಗಸಂದ್ರದಲ್ಲಿರುವರ 60 X 40 ಎರಡು ಸೈಟುಗಳು ಹಾಗೂ 30 X 40 ಒಂದು ಸೈಟ ನ್ನು 4ನೇ ಪ್ರತಿವಾದಿಗೆ ದಾನ ಪತ್ರದ ಮೂಲಕ ನೀಡಿದ್ದೀರ ಎಂದರೇ ಹೌದು. ಈ ಮೇಲೆ ಹೇಳಿದ ಸ್ವತ್ತು ಪಿತ್ರಾರ್ಜಿತ ಸ್ವತ್ತು ಅಲ್ಲ ಎಂದರೇ ಹೌದು. ಈ ದಾವೆಯಲ್ಲಿ ಎಲ್ಲಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ತೊಂದರೆ ಇಲ್ಲ ಎಂದರೇ ಇಲ್ಲ.

6. ನನಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಭದ್ರಪುರದಲ್ಲಿ 24 ಎಕರೆ ಗಿಂತ ಹೆಚ್ಚು ಆಸ್ತಿ ನನ್ನ ಹೆಸರಿನಲ್ಲಿ ಇದೆ ಎಂದರೇ ಹೌದು. ಈ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿ ಪರಿಹಾರ ಪಡೆಯಲು ತೊಂದರೆ ಇದೆಯಾ ಎಂದರೇ ಇಲ್ಲ. ದಾವಾ ಸ್ವತ್ತುಗಳನ್ನು ಒಟ್ಟು ಕುಟುಂಬದ ಪರವಾಗಿ ಖರೀದಿ ಮಾಡಿಲ್ಲ ಎಂದರೇ ಸರಿಯಲ್ಲ. ದಾವಾ

ಸ್ವತ್ತನ್ನು 1ನೇ ಪ್ರತಿವಾದಿಯ ಹೆಂಡತಿಯ ತಂದೆ ಹುಚ್ಚೇಗೌಡ ಖರೀದಿ ಮಾಡಿ ತನ್ನ ಅಳಿಯ 1ನೇ ಪ್ರತಿವಾದಿಗೆ ನೀಡಿದ್ದರು ಎಂದರೇ ಸುಳ್ಳು. 1ನೇ ಪ್ರತಿವಾದಿಯ ಹೆಸರಿಗೆ ಕ್ರಯ ಪತ್ರದ ಮಾಡಿದ ವಿಚಾರ ನಿಮಗೆ ಯಾವಾಗ ಗೊತ್ತಾಗಿದೆ ಎಂದರೇ ನೆನಪಿಲ್ಲ. ನಿಮ್ಮ ಕುಟುಂಬದಲ್ಲಿ ಏನೇನೇನೂ ವ್ಯವಹಾರ ನಡೆಯುತ್ತದೆ ಎಂದು ಗೊತ್ತಿಲ್ಲ ಎಂದರೇ ಹೌದು. 1ನೇ ಪ್ರತಿವಾದಿಯ ಹೆಂಡತಿಯ ತಂದೆ ಹುಚ್ಚೇಗೌಡ ಖರೀದಿ ಮಾಡಿ ತನ್ನ ಅಳಿಯ 1ನೇ ಪ್ರತಿವಾದಿಗೆ ಕ್ರಯ ಪತ್ರ ಮಾಡಿದ್ದಾರೆಂದು ದಾವಾ ಹಾಕುವ ಪೂರ್ವದಲ್ಲಿ ನಿಮಗೆ ಯಾವಾಗ ಗೊತ್ತಾಯಿತು ಎಂದರೇ ಸಾಕ್ಷಿ 1ನೇ ಪ್ರತಿವಾದಿ ತನ್ನ ಮಗನಿಗೆ ದಾನ ಪತ್ರ ಮಾಡಿದಾಗ ಗೊತ್ತಾಗಿದೆ. ( ಈ ಹಂತದಲ್ಲಿ ವಾದಿ ಪರ ವಕೀಲರು ಅದು ಕಪೌಂಡ್ ಪ್ರಶ್ನೆ ಎಂದು ತಕಾರರು ಮಾಡಿದ್ದು ತಕಾರರನ್ನು ತಳ್ಳಿ ಹಾಕಲಾಯಿತು.) ದಾವಾ ಸ್ವತ್ತಿಗೆ ಸಂಬಂದ ಪಟ್ಟಂತೆ ದಾವಾ ಪೂರ್ವದಲ್ಲಿ 1ನೇ ಪ್ರತಿವಾದಿಯ ಹೆಸರಿಗೆ ಕ್ರಯ ಆಗಿದೆ ಎಂದು ಎಲ್ಲಾದಾರೂ ಪ್ರಶ್ನೆ ಮಾಡಿದ್ದೀರ ಎಂದರೇ ಹೌದು. ಮನೆಯಲ್ಲಿ ಮಾಡಿದ್ದೇನೆ. ಯಾವುದಾದರೂ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೀರ ಎಂದರೇ ಇಲ್ಲ.

7. ನಿಮ್ಮ ಹೆಸರಿನಲ್ಲಿರುವ ಆಸ್ತಿ 1 ಮತ್ತು 4 ಮತ್ತು 5ನೇ ಪ್ರತಿವಾದಿ ಹೆಸರಿನಲ್ಲಿರುವ ಆಸ್ತಿಗಳು ಇಲ್ಲಿಯವರೆಗೂ ಭಾಗ ಆಗಿದೆಯೋ ಅಥವಾ ಇಲ್ಲವೋ ಎಂದರೇ ಭಾಗ ಆಗಿಲ್ಲ. ದಾವಾ ಸ್ವತ್ತು 1ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೇ ಸುಳ್ಳು. ಈ ದಾವಾ ಸ್ವತ್ತನ್ನು 1ನೇ ಪ್ರತಿವಾದಿ ಅನುಭವಿಸಿಕೊಂಡು ಬರುತ್ತಿದ್ದರು ಎಂದರೇ ಸುಳ್ಳು. ದಿ 19.09.2019 ರಲ್ಲಿ 1ನೇ ಪ್ರತಿವಾದಿ ದಾವಾ ಸ್ವತ್ತಿನ 2ನೇ ಪ್ರತಿವಾದಿಗೆ ದಾನ ಪತ್ರ ಮಾಡಿದ್ದಾರೆ ಎಂದರೇ ಹೌದು. ದಾನ ಪತ್ರ ಕಾನೂನು ಬದ್ಧವಾಗಿದೆ ಎಂದರೆ ಸುಳ್ಳು. ದಾನ ಪತ್ರದ ಆಧಾರದ ಮೇಲೆ 2ನೇ ಪ್ರತಿವಾದಿ ಸ್ವಾ ಧೀನ ಹೊಂದಿದ್ದಾರೆ ಎಂದರೇ ಹೌದು. ದಾವಾ ಸ್ವತ್ತನ ಮೇಲೆ 2ನೇ ಪ್ರತಿವಾದಿಯನ್ನು ಹೊರತು ಪಡಿಸಿ ಯಾರಿಗೂ ಹಕ್ಕು ಅಧಿಕಾರ ಇಲ್ಲ ಎಂದರೇ ನಮ್ಮ ಕುಟುಂಬದ ಎಲ್ಲಾರಿಗೂ ಇದೆ. ಟಿ ನರಸೀಪುರ ತಾಲ್ಲೂಕು ಕೆಂಪಾಪುರ ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕು ಭದ್ರಪುರದಲ್ಲಿ ಸುಮಾರು 50 ಎಕರೆ ಕ್ಕಿಂತ ಹೆಚ್ಚು ಆಸ್ತಿಗಳನುನ ಖರೀದಿ ಮಾಡಿದ್ದು ಆದಾಯ ತೆರಿಗೆ ತೋರಿಸಿದ್ದೀರ ಎಂದರೇ ಹೌದು. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾದ್ಯವ ಎಂದರೇ ಇಲ್ಲ. ಆದಾಯ ತೆರಿಗೆ ಯಲಿಲ ಆಸ್ತಿಗಳ ಬಗ್ಗೆ ಆಸ್ತಿಗಳ ಬಗ್ಗೆ ತೋರಿಸಿಲ್ಲದ ಕಾರಣ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ಮೇನೇ ಎಂದರೆ ಸರಿಯಲ್ಲ.

8. 1ನೇ ಪ್ರತಿವಾದಿ 7 ತರಗತಿ ವೆರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. 4 ಮತ್ತು 5 ನೇ ಏನು ಓದಿದ್ದಾರೆ ನನಗೆ ಗೊತ್ತಿಲ್ಲ. 4ನೇ ಪ್ರತಿವಾದಿ ಅಬಕಾರಿ ಇಲಾಖೆಯಲ್ಲಿ ರಾಜ್ಯ ಮಟ್ಟದ

ಅಧಿಕಾರಿಯಾಗಿ ನಿವೃತ್ತಿ ಹೊಂದಿದ್ದಾರೆ ಎಂದರೇ ಹೌದು. 5ನೇ ಪ್ರತಿವಾದಿ ಡಬಲ್ ಡಿಗ್ರಿ ಮಾಡಿದ್ದಾರೆ ಎಂದರೇ ಹೌದು. 1 ಮತ್ತು 2ನೇ ಪ್ರತಿವಾದಿಯವರಿಗೆ ತೊಂದರೆ ಕೊಡಲು ನಾನು ಮತ್ತು 3 ರಿಂದ 5 ನೇ ಪ್ರತಿವಾದಿಗಳು ಸಾಮೀಲಾಗಿ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೇ ಸರಿಯಲ್ಲ. ನಿಪಿ-14 ನ್ನು 1ನೇ ಪ್ರತಿವಾದಿ ಮಾವ 1ನೇ ಪ್ರತಿವಾದಿಗೆ ಮಾಡಿಕೊಟ್ಟ ಕ್ರಯ ಪತ್ರ ಎಂದರೇ ಹೌದು. ನನ್ನ ವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ ನಿಪಿ-14 ರ ಬಗ್ಗೆ ಉಲ್ಲೇಖ ಇಲ್ಲ ಎಂದರೇ ಸರಿಯಲ್ಲ. ಆ ವಿಚಾರ ಇಲ್ಲದೆ ಇದ್ದರು ನಿಪಿ-14 ನ್ನು ಪ್ರಥಮವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೇ ಸರಿಯಲ್ಲ. ನಿಪಿ-11 ರಿಂದ 13 ಆಸ್ತಿಗಳನ್ನು ಈ ದಾವೆಯಲ್ಲಿ ತೋರಿಸಲು ತೊಂದರೇ ಇದೆಯಾ ಎಂದರೇ ಇಲ್ಲ. ಆದರೆ 1ನೇ ಪ್ರತಿವಾದಿ ಅವರಿಗೆ ಬೇಕಾದ ಆಗೇ ಮಾಡಿಕೊಂಡಿದ್ದಾನೆ. 1ನೇ ಪ್ರತಿವಾದಿಗೆ ಹೆಚ್ಚಾಗಿ ಅಕ್ಷರ ಜ್ಞಾನ ಮತ್ತು ಅರಿವು ಇಲ್ಲದ ಕಾರಣ ಅವರ ಮೇಲೆ ಸುಳ್ಳು ದಾವೆ ದಾಖಲು ಮಾಡಿದ್ದೇವೆ ಎಂದರೇ ಇಲ್ಲ. ದಾವಾ ಸ್ವತ್ತು 2ನೇ ಪ್ರತಿವಾದಿಗೆ ಸ್ವಯಾರ್ಜಿತ ಆಸ್ತಿ ಇಲ್ಲ ಎಂದರೇ ಸುಳ್ಳು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)